# ಕರ್ನಾಟಕ ವಿಧಾನ ಪರಿಷತ್ತು

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರು : ಶ್ರೀ ಎಂ.ನಾಗರಾಜು**

**ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 526**

**ಉತ್ತರಿಸಬೇಕಾದ ದಿನಾಂಕ : 11.07.2023**

**ಉತ್ತರಿಸಬೇಕಾದ ಸಚಿವರು : ಸಹಕಾರ ಸಚಿವರು**

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದ ಹಾಲು ಉತ್ಪಾದಕರಿಗೆ ಸರಳ ನಿಬಂಧನೆಗಳೊಂದಿಗೆ ಸಾಲ ಸೌಲಭ್ಯಗಳನ್ನು ನೀಡಲು ಉದ್ದೇಶಿಸಿರುವ 'ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್' ಸ್ಥಾಪನೆ ಯಾವ ಹಂತದಲ್ಲಿದೆ: (ಮಾಹಿತಿ ನೀಡುವುದು) | ಸರ್ಕಾರದ ಆದೇಶ ಸಂಖ್ಯೆ: ಸಿಒ 60 ಸಿಸಿಬಿ 2022ರನ್ವಯ ದಿನಾಂಕ: 23-03-2022 ರಂದು "ನಂದಿನಿ ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪಿಸಲು ಅನುಮೋದನೆ ನೀಡಿ ಆದೇಶಿಸಲಾಗಿತ್ತು.<br><br>ಈ ಸಂಬಂಧ ದಿನಾಂಕ: 21-07-2022 ರಂದು ಬ್ಯಾಂಕ್ ನೋಂದಣಿ ಪೂರ್ವ ಷೇರು ಸಂಗ್ರಹಣೆಗೆ ಕೆ.ಎಂ.ಎಫ್.ನ ವ್ಯವಸ್ಥಾಪಕ ನಿರ್ದೇಶಕರು ಸಲ್ಲಿಸಿದ್ದ ಪ್ರಸ್ತಾವನೆಯನ್ನು ದಿನಾಂಕ:25-07-2022 ರಂದು ಮುಂದಿನ ಕ್ರಮಕ್ಕಾಗಿ ಆರ್.ಬಿ.ಐ.ಗೆ ಸಲ್ಲಿಸಲಾಗಿತ್ತು. ಆರ್.ಬಿ.ಐ ಈ ಸಂಬಂಧ ದಿನಾಂಕ: 25-07-2022 ರಂದು ಸರ್ಕಾರಕ್ಕೆ ಪತ್ರ ಬರೆದು ಕ್ಷೀರ ಸಮೃದ್ಧಿ ಸಹಕಾರ ಬ್ಯಾಂಕ್ ಸ್ಥಾಪಿಸುವ ಕುರಿತು ಆರ್. ಬಿ.ಐ ಕಾಯ್ದೆಯಲ್ಲಿನ ಅವಕಾಶಗಳಲ್ಲಿರುವ ತೊಡಕುಗಳನ್ನು ಉಲ್ಲೇಖಿಸಿ ಆರ್‌ಬಿಐ ಅವಕಾಶಗಳಿಗೆ ಅನುಗುಣವಾಗಿ ಮರುಪ್ರಸ್ತಾವೆ ಸಲ್ಲಿಸುವ ಕುರಿತು ನಿರ್ಣಯ ತೆಗೆದುಕೊಳ್ಳಲು ಸೂಚಿಸಿ ಪ್ರಸ್ತಾವೆಯನ್ನು ಹಿಂದಿರುಗಿಸಿರುತ್ತಾರೆ.<br><br>ಮುಂದುವರೆದು, ಕ್ಷೀರ ಸಮೃದ್ಧಿ ಬ್ಯಾಂಕ್ ರಚಿಸುವ ಸಂಬಂಧ ಹಿಂದಿನ ಮಾನ್ಯ ಮುಖ್ಯಮಂತ್ರಿಯವರು ಮಾನ್ಯ ಕೇಂದ್ರ ಹಣಕಾಸು ಸಚಿವರಿಗೆ ಬರೆದ ಪತ್ರವನ್ನು ಮಾನ್ಯ ಮುಖ್ಯಮಂತ್ರಿಯವರ ಅನುಮೋದನೆಗಾಗಿ ಸಲ್ಲಿಸಲಾಗಿತ್ತು. ಈ ಸಂಬಂಧ ಮಾನ್ಯ ಮುಖ್ಯಮಂತ್ರಿಯವರ ಕಛೇರಿಯಿಂದ ಪ್ರಸ್ತುತ ನೀತಿ ಸಂಹಿತೆ ಜಾರಿಯಲ್ಲಿರುವುದರಿಂದ ನಂತರ ಅವಶ್ಯವಿದ್ದಲ್ಲಿ ಕಡತವನ್ನು ಸಲ್ಲಿಸುವಂತೆ ಸೂಚಿಸಿ ಹಿಂದಿರುಗಿಸಿರುತ್ತಾರೆ. |

| | | |
|---|---|---|
| ಆ) | ಗ್ರಾಮೀಣ ಪ್ರದೇಶದ ರೈತ ಕುಟುಂಬಗಳಿಗೆ ಉತ್ತಮ ವೈದ್ಯಕೀಯ ಸೌಲಭ್ಯಗಳನ್ನು ನೀಡಲು ಉದ್ದೇಶಿಸಿರುವ ಪರಿಷ್ಕೃತ ಯಶಸ್ವಿನಿ ಯೋಜನೆಯಡಿಯಲ್ಲಿ ಕಳೆದ ಮೂರು ವರ್ಷಗಳಲ್ಲಿ ಎಷ್ಟು ರೈತ ಕುಟುಂಬಗಳು ಉಪಯೋಗ ಪಡೆದುಕೊಂಡಿದೆ? (ಜಿಲ್ಲಾವಾರು ಮಾಹಿತಿ ನೀಡುವುದು) | ರಾಜ್ಯದಲ್ಲಿ ಈ ಹಿಂದೆ 2003ರಲ್ಲಿ ಯಶಸ್ವಿನಿ ಯೋಜನೆಯನ್ನು ಪ್ರಾರಂಭಿಸಿದ್ದು, 2003-04 ರಿಂದ 2017-18ರವರೆಗೆ ಜಾರಿಯಲ್ಲಿದ್ದು, ನಂತರ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಗೆ ವರ್ಗಾವಣೆಗೊಂಡಿದ್ದು, ದಿನಾಂಕ 31-05-2018 ರಿಂದ ಈ ಯೋಜನೆಯು ಸ್ಥಗಿತಗೊಂಡಿರುತ್ತದೆ. 2018-19, 2019-20 ಹಾಗೂ 2020-21 ಸಾಲಿನಲ್ಲಿ ಯಶಸ್ವಿನಿ ಯೋಜನೆ ಜಾರಿ ಇರುವುದಿಲ್ಲ.<br><br>ಮುಂದುವರೆದು, ರಾಜ್ಯದಲ್ಲೆಡೆ ಸಹಕಾರಿಗಳ ಮತ್ತು ರೈತರ ನಿರಂತರ ಬೇಡಿಕೆಯನ್ವಯ ರಾಜ್ಯ ಸರ್ಕಾರವು 2022-23ನೇ ಸಾಲಿನ ಆಯವ್ಯಯ ಭಾಷಣದಲ್ಲಿ ಪರಿಷ್ಕೃತ ಯಶಸ್ವಿನಿ ಯೋಜನೆಯನ್ನು ಸಹಕಾರ ಸಂಘಗಳ ಸದಸ್ಯರಿಗಾಗಿ (ಗ್ರಾಮೀಣ ಮತ್ತು ನಗರ) ಘೋಷಿಸಿ, ಅದರಂತೆ ಈ ಯೋಜನೆಯನ್ನು ಸಹಕಾರ ಇಲಾಖೆಯಿಂದ ಅನುಷ್ಠಾನಗೊಳಿಸಿದೆ.<br><br>ಪರಿಷ್ಕೃತ ಯಶಸ್ವಿನಿ ಯೋಜನೆಯಡಿ ದಿನಾಂಕ: 01-11-2022 ರಿಂದ 31-03-2023 ರ ಅವಧಿಯಲ್ಲಿ ಸದಸ್ಯತ್ವದ ನೊಂದಣಿಯನ್ನು ಮಾಡಲಾಗಿದೆ.<br><br>ಯಶಸ್ವಿನಿ ಯೋಜನೆಯಲ್ಲಿ ಫಲಾನುಭವಿಗಳಿಗೆ ಸರ್ಕಾರದ ಆದೇಶದಂತೆ ರಾಜ್ಯಾದ್ಯಂತ ಇರುವ ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ದಿನಾಂಕ:01-01-2023 ರಿಂದ ಚಿಕಿತ್ಸೆಯನ್ನು ಪ್ರಾರಂಭಿಸಲಾಗಿದೆ.<br><br>ದಿನಾಂಕ:01-01-2023 ರಿಂದ 30-06-2023ರ ಅವಧಿಯಲ್ಲಿ ಒಟ್ಟು 22,499 ರೋಗಿಗಳು 476 ನೆಟ್‌ವರ್ಕ್ ಆಸ್ಪತ್ರೆಗಳಲ್ಲಿ ರೂ.38.52 ಕೋಟಿ ಮೊತ್ತದ ಚಿಕಿತ್ಸೆಯನ್ನು ಪಡೆದಿರುತ್ತಾರೆ.<br><br>ಜಿಲ್ಲಾವಾರು ವಿವರವನ್ನು **ಅನುಬಂಧ-1**ರಲ್ಲಿ ನೀಡಲಾಗಿದೆ. |

**ಸಂಖ್ಯೆ: ಸಿಒ 133 ಸಿಸಿಬಿ 2023**

K. N. Rajanna

**(ಕೆ.ಎನ್.ರಾಜಣ್ಣ)**
ಸಹಕಾರ ಸಚಿವರು

ಅನುಬಂಧ - 1

| District Wise Treatments Availed In The Network Hospitals For The Period From 01-01-2023 To 30-06-2023 | | | | |
|---|---|---|---|---|
| S.No | District Names | Number of Hospitals | Number of Patients | Treatment Amount |
| 1 | Davanagere | 25 | 2384 | 32,208,145 |
| 2 | Bengaluru (Including Bengaluru (Rural) Bengaluru Zone1,Zone2,Zone3,Zone4 Districts) | 41 | 2060 | 57,970,238 |
| 3 | Dharwad | 15 | 2016 | 18,167,950 |
| 4 | Dakshina Kannada | 16 | 1613 | 40,814,795 |
| 5 | Mysore | 31 | 1609 | 39,142,976 |
| 6 | Shivamogga | 26 | 1571 | 26,806,330 |
| 7 | Mandya | 18 | 1302 | 16,611,438 |
| 8 | Bagalkot | 46 | 1255 | 13,664,800 |
| 9 | Hassan | 27 | 1232 | 36,067,387 |
| 10 | Belagavi | 45 | 1178 | 23,443,749 |
| 11 | Tumkur | 21 | 844 | 12,006,750 |
| 12 | Udupi | 12 | 824 | 9,074,950 |
| 13 | Bidar | 16 | 765 | 9,358,795 |
| 14 | Vijayapura | 16 | 614 | 6,211,800 |
| 15 | Haveri | 16 | 473 | 5,542,500 |
| 16 | Koppal | 10 | 390 | 5,079,550 |
| 17 | Chikkaballapur | 12 | 325 | 3,029,100 |
| 18 | Ramanagara | 6 | 320 | 4,514,900 |
| 19 | Kalaburagi | 13 | 304 | 8,249,545 |
| 20 | Ballari & Vijayanagar | 10 | 257 | 2,955,300 |
| 21 | Chikkamagaluru | 10 | 215 | 3,007,950 |
| 22 | Uttara Kannada | 6 | 189 | 1,908,900 |
| 23 | Raichur | 10 | 174 | 2,377,950 |
| 24 | Gadag | 10 | 173 | 2,078,250 |
| 25 | Chitradurga | 6 | 145 | 2,130,126 |
| 26 | Kodagu | 3 | 119 | 881,000 |
| 27 | Kolar | 4 | 96 | 1,395,801 |
| 28 | Chamarajanagar | 3 | 37 | 393,450 |
| 29 | Yadgir | 2 | 15 | 119,250 |
| | Grand Total | 476 | 22499 | 385,213,673 |

Scanned with OKEN Scanne

Scanned with AnyScanner